7. ವರದಿಗಳನ್ನೊಪ್ಪಿಸುವುದು

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ಉಪಾಧ್ಯಕ್ಷರೆ, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ 37ನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಸೋಮ್ಲಾನಾಯಕ್ (ಪಾವಗಡ): ಮಾನ್ಯ ಉಪಧ್ಯಕ್ಷರೆ, ಮೈಸೂರು ಕಾಗದದ ಕಾರ್ಖಾನೆಗೆ ಸಂಬಂಧಪಟ್ಟಂತೆ ಸಾರ್ವಜನಿಕ ಉದ್ಯಮಗಳ ಸಮಿತಿಯ 78ನೇ ವಿಶೇಷ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಸಿ.ಎಸ್.ಪುಟ್ಟೇಗೌಡ (ಶ್ರವಣಬೆಳಗೊಳ): ಮಾನ್ಯ ಉಪಾಧ್ಯಕ್ಷರೆ ವಿಧಾನ ಸಭೆಯ ಅಂದಾಜುಗಳ ಸಮಿತಿಯ ಎರಡನೇ ವರದಿಯನ್ನು ಅಂದರೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಎಂ.ಚಂದ್ರಪ್ಪ (ಅಧ್ಯಕ್ಷರು, ಅಧೀನ ಶಾಸನ ರಚನಾ ಸಮಿತಿ): ಅಧೀನ ಶಾಸನ ರಚನಾ ಸಮಿತಿಯ 23ನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

8. ವಿತ್ತೀಯ ಕಾರ್ಯಕಲಾಪ

1998-99ನೇ ಸಾಲಿನ ಪೂರಕ ಅಂದಾಜುಗಳು

ಶ್ರೀ ಎಂ.ಸಿ.ನಾಣಯ್ಯ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಉಪ ಮುಖ್ಯಮಂತ್ರಿಯವರ ಪರವಾಗಿ 1998-99ನೇ ಸಾಲಿನ ಪೂರಕ ಅಂದಾಜುಗಳ ಎರಡನೇ ಕಂತನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಪಿ.ಸಿ.ಸಿದ್ಧನಗೌಡರ್ : ಮಾನ್ಯ ಉಪಾಧ್ಯಕ್ಷರೆ, ಹುಬ್ಬಳ್ಳಿಯಲ್ಲಿ ರಿಜಿಸ್ಟ್ರಾರ್ ಆಫ್ ಕೋ-ಆಪರೇಟೀವ್ ಸೊಸೈಟೀಸ್, ಇವರು ಒಂದು ಆದೇಶವನ್ನು ಮಾಡಿದ್ದಾರೆ. ಇದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಶೂನ್ಯ ವೇಳೆಗೆ ಈ ವಿಷಯವನ್ನು ಕನ್‌ವರ್ಟ್ ಮಾಡಬೇಕು. ಸಹಕಾರ ಮಂತ್ರಿಗಳಿಗೆ ಈ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರಶ್ನೆ ಮಾಡಬೇಕಾಗಿದೆ.

ಉಪಾಧ್ಯಕ್ಷರು: ನಾನು ಮುಂದೆ ನಿಮ್ಮನ್ನು ಈ ವಿಷಯ ಪ್ರಸ್ತಾಪ ಮಾಡಲು ಕರೆಯುತ್ತೇನೆ.